ಸುಧಾ

60 ವಜ್ರ ಮಹೋತ್ಸವ

## ‘ದುರ್ಗ ಕುಟುಂಬ’ದ ಪುಟ್ಟ ‘ಸುಧಾ’

ಐವತ್ತರಿಂದ ತೊಂಬತ್ತರ ದಶಕದವರೆಗೆ ನಮ್ಮ ಕುಟುಂಬ ನೆಲೆಸಿದ್ದು ನಮ್ಮ ಹೆಮ್ಮೆಯ ಚಿತ್ರದುರ್ಗದಲ್ಲಿ. ಅಪ್ಪ, ಅಮ್ಮನಿಗೆ ಸಪ್ತ ಸಂತಾನ, ತುಂಬಿದ ದೊಡ್ಡ ಕುಟುಂಬ. ಬಂಧು ಬಳಗದವರೆಲ್ಲಾ ನಮ್ಮನ್ನು ಗುರುತಿಸಿ, ಕರೆಯೋದು ‘ದುರ್ಗ ಕುಟುಂಬ’ವೆಂದೇ... ‘ಸುಧಾ’, ನೀನು ಜನಿಸಿದಾಗಿನಿಂದಲೂ ಕೃಷ್ಣೆಯಂತೆ. ಅಷ್ಟಮ ಸಂತಾನವಾಗಿ ನಮ್ಮ ಕುಟುಂಬದಲ್ಲಿ ಆಗಮಿಸಿದಂತೆ, ಸಂಭ್ರಮಿಸಿದ್ದು ಈಗಲೂ ಸುಂದರ ನೆನಪು. ಆಗಿದ್ದ ಹಿರಿಯರು ಈಗಿಲ್ಲವಾದರೂ ಕುಟುಂಬದ ಮಕ್ಕಳೆಲ್ಲ ತಮ್ಮ ತಮ್ಮ ಸಂಸಾರಗಳೊಂದಿಗೆ ಬೇರೆ ಬೇರೆ ಊರುಗಳಲ್ಲಿದ್ದರೂ ಹಿರಿಯರು ನಿನಗೆ ತೋರಿದ ಅಭಿಮಾನ, ಪ್ರೀತಿ, ವಾತ್ಸಲ್ಯ ಈಗಲೂ ಉಳಿದುಕೊಂಡಿದೆ. ನಮ್ಮ ಕುಟುಂಬ ಸದಸ್ಯರೆಲ್ಲರ ಮನೆಯಲ್ಲೂ ನೀನು ಕಾಣಬರುತ್ತಿರುವುದು ನಿನ್ ಮೇಲಿನ ಅಭಿಮಾನ, ಪ್ರೀತಿಯಲ್ಲದೇ ಮತ್ತೇನೂ ಅಲ್ಲ. ಅರವತ್ತರ ನಮ್ಮ ಪುಟ್ಟ ‘ಸುಧಾ’ಳಿಗೆ ಹೃತ್ಪೂರ್ವಕ ಶುಭ ಹಾರೈಕೆ.

ನಿನ್ನ,
ದುರ್ಗ ಕುಟುಂಬ




## ಬೆಲೆ ಕಟ್ಟಲಾಗದು

‘ಸುಧಾ’ ಕೊಳ್ಳುವಾಗ
ಜಾಸ್ತಿ ಅನ್ನಿಸಿತು
ಇದ್ರ ಬೆಲೆ,
ಓದಿದ್ಮೇಲೆ ತಿಳಿಯಿತು
ಕಟ್ಟಕ್ಕೆ ಆಗಲ್ಲ
ಇದ್ಕೆ ಬೆಲೆ

–ಬಿ.ಆರ್. ಉಷಾ, ಬೆಂಗಳೂರು

‘ಸುಧಾ’ ಜೊತೆಗಿನ ಓದುಗರ ಒಡನಾಟ

## ಬುದ್ಧಿಗೆ ಸಾಣೆ ಹಿಡಿದ ಪತ್ರಿಕೆ

ನಾನು ಕಳೆದ ನಲವತ್ತೈದು ವರ್ಷಗಳಿಂದ ‘ಸುಧಾ’ ಪತ್ರಿಕೆಯ ಓದುಗ. ‘ಸುಧಾ’ ಪತ್ರಿಕೆಯ ‘ವಿಚಾರ ಲಹರಿ’, ಎನ್. ವಾಸುದೇವ್ ಅವರ ‘ಪ್ರಶ್ನಾಂಕಣ’ ನನಗೆ ತುಂಬ ಇಷ್ಟದ ಅಂಕಣಗಳು. ಈ ಎರಡೂ ಅಂಕಣಗಳು ಓದುಗರ (ಕನ್ನಡಿಗರ) ಜ್ಞಾನದಾಹವನ್ನು, ಹಾಗೆಯೇ ಅವರಲ್ಲಿನ ವಿಚಾರಶೀಲತೆಯನ್ನು ಹೆಚ್ಚಿಸಿವೆ; ಅವರ ಬದುಕನ್ನು ಅಕ್ಷರಶಃ ಬೆಳಗಿವೆ ಎಂದರೆ ಬಹುಶಃ ಉತ್ಪ್ರೇಕ್ಷೆ ಆಗಲಾರದು. ಈ ಹಿಂದೆ ಹಿರಿಯ ಲೇಖಕರಾದ ದಿವಂಗತ ಎಚ್ಚೆಸ್ಕೆ ಅವರ ‘ವಾರದ ವ್ಯಕ್ತಿ’ ಅಂಕಣವನ್ನು ನಾನು ತಪ್ಪದೆ ಓದುತ್ತಿದ್ದೆ. ಅಂದ ಹಾಗೆ ಹಿರಿಯ ವ್ಯಂಗ್ಯಚಿತ್ರಕಾರ ದಿವಂಗತ ಆರ್. ಮೂರ್ತಿ ಅವರ ಚಿತ್ರಗಳು ನನ್ನ ಬುದ್ಧಿಗೆ ಸಾಣೆ ಹಿಡಿದಿರುವುದನ್ನು ಸಹ ನಾನು ತುಂಬ ಕೃತಜ್ಞತೆಯಿಂದ ನೆನೆಯುವೆ. ‘ಸುಧಾ’ ಕನ್ನಡದ ಶ್ರೇಷ್ಠ ಪತ್ರಿಕೆ ಎಂಬುದರಲ್ಲಿ ಎರಡು ಮಾತೇ ಇಲ್ಲ.

–ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ



## ‘ಸುಧಾ’ರಿಸಿದ ಬೆಕ್ಕು!

ಹಲವು ವರ್ಷಗಳಿಂದ ಸಂಗ್ರಹಿಸಿದ್ದ ಕೆಲವು ವಾರಪತ್ರಿಕೆಗಳು, ಮಾಸಪತ್ರಿಕೆಗಳು ನನ್ನಲ್ಲಿದ್ದವು. ಅವುಗಳನ್ನು ಆಗಾಗ ಬಿಸಿಲಿಗೆ ಹಾಕಿ ಒಪ್ಪ ಮಾಡುತ್ತಿದ್ದೆ. ಇತ್ತೀಚೆಗೆ ಹಾಗೆ ಬಿಸಿಲಿಗೆ ಹರಡಿದ್ದೆ. ಸ್ವಲ್ಪ ಹೊತ್ತಿಗೆ ಬೆಕ್ಕೊಂದು ಬಂದು ಪುಸ್ತಕಗಳ ಮೇಲೆ ಪವಡಿಸಿತು. ಎಷ್ಟು ಸಲ ಓಡಿಸಿದರೂ ಮತ್ತೆ ಮತ್ತೆ ಬರುತ್ತಿತ್ತು.

ನಾನು ಹತಾಶನಾಗಿ ನೋಡುತ್ತಿದ್ದಾಗ, ಅದು ಚಿತ್ರದಲ್ಲಿ ಕಾಣುವಂತೆ ದಿನಾಂಕ 10, ಏಪ್ರಿಲ್ 1988ರ ‘ಸುಧಾ’ ಸಂಚಿಕೆಯನ್ನು ನೋಡುತ್ತಾ ಕುಳಿತುಕೊಂಡಿತು. ಮುಖಪುಟದಲ್ಲಿದ್ದ ಬೆಕ್ಕಿನ ಚಿತ್ರ ಅದರ ಗಮನಸೆಳೆಯಿತೇ? ಇರಲಿ ನೋಡುವಾ ಎಂದು ಒಂದು ಚಿತ್ರ ಕ್ಲಿಕ್ಕಿಸಿಕೊಂಡೆ. ನಂತರ ಪರಿಶೀಲಿಸಿದಾಗ ಆ ಸಂಚಿಕೆಯಲ್ಲಿ ಚೇತನ ಶೀತಲಬಾವಿ ಎಂಬುವವರು ಬೆಕ್ಕಿನ ಬಗ್ಗೆ ಒಂದು ಲೇಖನ ಬರೆದಿದ್ದು, ಅದಕ್ಕೆ ಪೂರಕವಾಗಿ ನಾನು ತೆಗೆದ ವಿವಿಧ ಭಂಗಿಯ ಬೆಕ್ಕಿನ ಚಿತ್ರಗಳನ್ನು ಉಪಯೋಗಿಸಿಕೊಂಡಿದ್ದು ನೆನಪಾಗಿ ಮನಸ್ಸಿಗೆ ಹರ್ಷವಾಯಿತು.

ಸೂಕ್ಷ್ಮಗ್ರಾಹಿ ಬೆಕ್ಕನ್ನು ಪುಸ್ತಕದ ವಾಸನೆ ಸೆಳೆಯಿತೋ ಅಥವಾ ಅದರ ಪೂರ್ವಜನ್ಮದ ವಾಸನೆ ಸೆಳೆಯಿತೋ ಗೊತ್ತಾಗಲಿಲ್ಲ. ಪೂರ್ವಜರೇ ಆಗಿದ್ದರೆ, ಆ ಬೆಕ್ಕು ಪೀಳಿಗೆ ಎಷ್ಟನೇ ತಲೆಮಾರಿನ ಸಂತತಿ ಆಗಿರಬಹುದು ಲೆಕ್ಕ ಹಾಕಿದೆ. ಆದರೆ ಮನುಷ್ಯರಂತೆಯೇ ಪ್ರಾಣಿಗಳನ್ನೂ ಸೆಳೆಯುವ ಶಕ್ತಿ ‘ಸುಧಾ’ಗಂತೂ ಇದ್ದೇ ಇದೆ ಎನಿಸಿತು!

–ಕೋ. ಪದ್ಮನಾಭ, ಬೆಂಗಳೂರು

## ‘ಸುಧಾ’ರಾಣಿ

‘ಸುಧಾ’ ನನ್ನ ಆತ್ಮೀಯ ಪತ್ರಿಕೆ. ನಾನು ಚಿಕ್ಕವಳಿದ್ದಾಗಿಂದ ‘ಸುಧಾ’ಳ ಜೊತೆಗಾತಿ. ಜೊತೆಗೆ, ನನ್ನನ್ನು ಎಲ್ಲರೂ ಸಿನಿಮಾ ನಟಿ ಸುಧಾರಾಣಿ ಹಾಗೆ ಇದ್ದೀಯಾ ಎನ್ನುತ್ತಾರೆ. ಹೀಗಾಗಿ ನಾನು ‘ಸುಧಾ’ರಾಣಿ ಪತ್ರಿಕೆ ಎಂದುಕೊಳ್ಳುತ್ತೇನೆ. ನನಗೆ ಪದಬಂಧ, ಸಿನಿಮಾಸುದ್ದಿ, ಜಾಣರ ಪೆಟ್ಟಿಗೆ, ಸಮುದ್ರ ಮಥನ, ಕಥೆ ಕಾದಂಬರಿ, ನಿಮ್ಮಪುಟ, ವಾರಭವಿಷ್ಯ, ಹಾಸ್ಯ ಎಲ್ಲವೂ ಇಷ್ಟ. ನನ್ನಲ್ಲಿ ‘ಸುಧಾ’ದ ಸಂಗ್ರಹವೇ ಇದೆ.

–ಶೀಲಾ ಸತೀಶ ಸಾಲೇರ, ಕಾರವಾರ